ಅನೇಕ ವರ್ಷಗಳ ಪರಿಚಯಸ್ಥನಂತೆ ಮಾತಾಡಿದ ಚಾರ್ಲಿ, ಬಾರ್ ರೂಮಿನಿಂದ ಬಾಟಲಿ ತಂದು, ಗಾಜಿನ ಲೋಟಕ್ಕೆ ಬಿಯರ್ ಸುರಿದು, ನಮ್ಮೆದುರು ಹಿಡಿದ. ಕರಮಚಂದ ಮೆಲ್ಲನೆ ಪೀಠಿಕೆ ಹಾಕಿದ,

"ಚಾರ್ಲಿ, ನೀವು ಇತ್ತೀಚೆಗೆ ಕೆಲವು ಆಂಟಿಕ್‌ಗಳನ್ನು ಕಾವೇರಿಗೆ ಮಾರಿದ್ರಿ ಅಲ್ವೆ?"

"ಅದೇ ಹೇಳಿದ್ನಲ್ಲ. ನಾನು ವೈಂಡ್ ಅಪ್ ಮಾಡ್ತಿದೀನಿ. ಮುಂದಿನ ತಿಂಗ್ಳು ಅಮೆರಿಕಕ್ಕೆ ಹೋಗ್ತೀನಿ. ಎಲ್ಲಾ ಖಾಲಿ ಮಾಡ್ಬೇಕು."

"ಯಾರೋ ಒಬ್ಬ ನೀವು ಮಾರಿದ ಕಲಾಕೃತಿಗಳ ಬಗ್ಗೆ ಕೇಳಿಕೊಂಡು ಕಾವೇರಿ ಎಂಪೋರಿಯಂಗೆ ಬಂದಿದ್ದನಂತೆ. ಯಾಕೆ ಅಂತ ನಿಮ್ಗೇನಾದ್ರೂ ಕಲ್ಪನೆ ಇದೆಯಾ?"

ಆ ಪ್ರಶ್ನೆಗೆ ಚಾರ್ಲಿ ಏಕಾಏಕಿ ಗಂಭೀರನಾದ. ಸಂದಿಗ್ಧಕ್ಕೊಳಗಾದವನಂತೆ ಕಂಡ.

"ನನ್ಗೆ ಇದು ಅರ್ಥ ಆಗ್ತಾ ಇಲ್ಲ. ಮೊದ್ಲು ಬಂದವ್ನು ಯಾರು? ನಂತ್ರ ಬಂದ ಇನ್ನೊಬ್ಬನಿಗೂ, ಮೊದಲಿನವ್ನಿಗೂ ಏನ್ ಸಂಬಂಧ? ನಿಮ್ಮ ಹತ್ರ ನಾನು ಎಲ್ಲಾ ಹೇಳ್ಬಿಡ್ತೀನಿ. ಇದರ ಆರಂಭ ಸುಮಾರು ನಾಲ್ಕು ವಾರಗಳ ಹಿಂದೆ ಆಯ್ತು ಅಂತ ಕಾಣುತ್ತೆ. ಹಾಂ, ಅನುಮಾನ ಬೇಡ... ನಿಖರವಾಗೇ ಹೇಳ್ಬಹುದು."

ಜೇಬಿನಿಂದ ಮೊಬೈಲು ತೆಗೆದು, ಚಕಚಕನೆ ಬೆರಳಾಡಿಸಿದ.

"ಹಾಂ. ಇಲ್ನೋಡಿ. ಪದ್ಯ."

ಆತ ಚರವಾಣಿಯನ್ನು ನಮ್ಮ ಮುಂದೆ ಹಿಡಿದ. ಅದರಲ್ಲಿ ಒಂದು ಚೌಪದಿ ಹೀಗಿತ್ತು:

"ಚಿಕ್ಕಪೇಟೆಯಲ್ಲಿ ನೂರೆಂಟು

